Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 215] ಮಂಗಳವಾರ 3—8—48 [ಬಿಡಿ ಪ್ರತಿ 3 ಪೈ

ಆರಬ್ ದೇಶಗಳ ಬೆಂಬಲ ಪಡೆಯಲು ನಿಜಾಮರ ದಾನ

ಬಟ್ಟೆ ಸಮಸ್ಯೆ ಬಗ್ಗೆ ಭಾರತ ಸರಕಾರದ ನೀತಿಯನ್ನೆ ಮೈಸೂರು ಸರ್ಕಾರ ಅನುಸರಿಸಿದೆ.

ಭಾರತ ಸರ್ಕಾರದ ಸಂಸ್ಥಾನ ಸಚಿವ ಶಾಖೆ ಸಿಬ್ಬಂದಿಯಲ್ಲಿ ಬಹಳ ಮಂದಿಯನ್ನು ತೆಗೆಯಲು ಶಿಫಾರಸು ಮಾಡಲಾಗಿದೆ. ಇದರಿಂದ ರೂ 76 ಲಕ್ಷ ಉಳಿತಾಯವಾಗುವುದು.

ಮೈಸೂರು ಸಂಸ್ಥಾನದ ರೈಲ್ವೆ ಕೆಲಸಗಾರರ ಸಂಘಾಧ್ಯಕ್ಷ ಶ್ರೀ ಹೆಚ್. ಡಿ ರಾಘವರಾಜರನ್ನು ಕೆಲಸದಿಂದ ತೆಗೆಯುವ ಆಜ್ಞೆಯಾಗಿದೆ. ಕಾರ್ಮದರ್ಶಿ ಶ್ರೀ ಶ್ರೀನಿವಾಸಯ್ಯಂಗಾರ್ಯರಿಗೆ ಒಲವಂತನಿವೃತ್ತಿಯಾಗುವುದು.

ಗಡಿನಾಡಿನ ಮಾಜಿ ಪ್ರಧಾನಿ ಡಾ || ಖಾನ್ ಸಾಹೇಬರು ದಸ್ತಗಿರಿಯಾಗಿ ಎಲ್ಲಿಗೋ ಒಯ್ಯಲ್ಪಟ್ಟರು.

ಡ್ಯಾನ್ಯೂಬ್ ನದಿ ಉಪಯೋಗ ಪಡೆಯುವ ಬಗ್ಗೆ ಬೆಲ್ಗ್ರೇಡಿನಲ್ಲಿ ಜರಗುತ್ತಿರುವ ಅಂತರರಾಷ್ಟ್ರೀಯ ಪರಿಷತ್ತಿನಲ್ಲಿ ರಷ್ಯ ಮತ್ತು ಫ್ರೆಂಚ್ ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ ಪರಿಗಣಿಸಲಾಗಿದೆ. ಇಂಗ್ಲೀಷ್ ಭಾಷೆಯನ್ನು ಅಧಿಕೃತ ಭಾಷೆಯಲ್ಲವೆಂದು ತಿರಸ್ಕರಿಸಲಾಗಿದೆ.

ನವದೆಹಲಿ ನಿರಾಶ್ರಿತರ ಆಶ್ರಯ ಕೇಂದ್ರಗಳ ವ್ಯವಸ್ಥಾಪಕರುಗಳ ಸಭೆಯಲ್ಲಿ ಪಂ || ನೆಹರುರವರು ಭಾಷಣ ಮಾಡುತ್ತಾ ನಿರಾಶ್ರಿತರುಗಳು ದೇಶಕ್ಕೆ ಭಾರವಾಗಕೂಡದು; ಅವರು ದೇಶ ಸಂಪತ್ತು ಹೆಚ್ಚಿಸುವ ಉದ್ಯಮದಲ್ಲಿ ತೊಡಗಬೇಕು ಎಂದು ತಿಳಿಸಿದ್ದಾರೆ.

ಈ ತಿಂಗಳ ಅಂತ್ಯ ಭಾಗದಲ್ಲಿ ಮೈಸೂರು ರಾಜ್ಯಾಂಗ ಸಭೆ ಸೇರುವುದೆಂದು ಗೊತ್ತಾಗಿದೆ ರಾಜ್ಯಾಂಗ ಸಭೆಯ ನಾನಾ ಸಮಿತಿಗಳು ಸಧ್ಯದಲ್ಲಿಯೇ ತಮ್ಮ ವರದಿ ಒಪ್ಪಿಸುವುವು.

ಭಾರತಕ್ಕೆ ಪಾಠ ಕಲಿಸಲು ಹೈದರಾಬಾದು ಸಿದ್ಧವಿದೆ ಎಂದು ಹೈದರಾಬಾದಿನ ಸ್ಥಳೀಯ ಸಂಸ್ಥೆಗಳ ಮಂತ್ರಿ ಯಾಮಿನ್ ಜುಬೇರಿ ಬಿಜಾಪುರದಲ್ಲಿ ತಿಳಿಸಿದರೆಂದು 'ಇತ್ತೆಹಾದ್' ವರದಿ.

ಬೆಂಗಳೂರಿನಲ್ಲಿ ರಾಮಲಿಂಗಂ ಎಂಬಾತನು ಸರಿಮಿತಿಯಿಲ್ಲದೆ 6 ಡಬ್ಬಿ ಚಿಮಿಣಿ ಎಣ್ಣೆ ಹೊಂದಿದ್ದನೆಂದು ರೂ. 100 ಜುಲ್ಮಾನೆ ಅಥವಾ 1 ತಿಂಗಳು ಸಾದಾ ಸಜಾ ವಿಧಿಸಲಾಯಿತು.

ಹೈದರಾಬಾದಿಗೆ ಅಕ್ರಮವಾಗಿ ಶಸ್ತ್ರಾಸ್ತ್ರ ಸಾಗಿಸಲು ಸಹಾಯ ಮಾಡುತ್ತಿಲ್ಲವೆಂದು ಗೋವಾ ಸರ್ಕಾರ ತಿಳಿಸಿದೆ.

ಫ್ರೆಂಚ್ ಭಾಷೆ ಅರಿಯದ ರೀತ್ಯಾ ತಾವು ಫ್ಯಾರಿಸ್ಸಿನ ರಾಯಭಾರಿಯಾಗುವುದಿಲ್ಲವೆಂದು ಸರ್ ಮಿರ್ಜಾ ಭಾರತ ಸರ್ಕಾರಕ್ಕೆ ತಿಳಿಸಿದ್ದಾರೆಂದು ವಂದಿ.

ಭಾರತ ಪ್ರಭುತ್ವದ ವಿರುದ್ಧ ನಿಜಾಂ ಸರ್ಕಾರ ಕಾಶ್ಮೀರ ವಿಚಾರಣಾ ಸಮಿತಿಗೆ 2 ಪತ್ರ ಬರೆದಿರುವುದಾಗಿ ನವದೆಹಲಿ ಸುದ್ದಿ ತಿಳಿಸುತ್ತದೆ.

ಅಮೇರಿಕದ ಸುಪ್ರಸಿದ್ಧ ಪತ್ರಿಕೋದ್ಯೋಗಿ ಶ್ರೀ ಲೂಯಿಫಿಶರ್ ಬೊಂಬಾಯಿಗೆ ಆಗಮಿಸಿದ್ದಾರೆ ಅವರು ಭಾರತದಲ್ಲಿ 3 ತಿಂಗಳಿರುವರು. ಮಹಾತ್ಮ ಗಾಂಧೀಜೀ ಜೀವನ ಚರಿತ್ರೆಯನ್ನು ಅವರು ಬರೆಯುವರು

ಮಧ್ಯವರ್ತಿಗಳ ಮೂಲಕ ಸಂಧಾನ ಸಾಧ್ಯವಿಲ್ಲ. ಸಂಧಾನ ಬೇಕಿದ್ದರೆ ನಿಜಾಮರೇ ದೆಹಲಿಗೆ ಬರಲಿ ಎಂದು ಸರ್ ಮಿರ್ಜಾರಿಗೆ ಭಾರತ ಸರ್ಕಾರ ತಿಳಿಸಿದೆ.

ಕಾಶ್ಮೀರ ಧಾಳಿಕಾರರ ಪ್ರಧಾನ ಕಚೇರಿ ಬೇರೇ ಸ್ಥಳಕ್ಕೆ ವರ್ಗವಾಗಲಿರುವದೆಂದು ತಿಳಿದುಬಂದಿದೆ.

ಭೀಕರ ಕೊಲೆ

ಧರ್ಮ ರತ್ನಾಕರ ಶ್ರೀ ಸಿ. ಪೆರುಮಾಳ್ ಚೆಟ್ಟರು ಈ ದಿವಸ ಬೆಳಿಗ್ಗೆ ನಂಜನಗೂಡಿನಲ್ಲಿ ಕೊಲೆ ಮಾಡಲ್ಪಟ್ಟರು.

ಸಿ ಪಿ ಸಿ. ಮೋಟಾರು ಕಚೇರಿ ಈ ದಿನ ಬಂದಾಗಿದೆ.

ಮೈಸೂರಿನಿಂದ ನಂಜನಗೂಡಿಗೆ ಪೋಲೀಸರು ತೆರಳಿದ್ದಾರೆ.

ಮೃತರ ಬಂಧು ಮಿತ್ರರುಗಳು ನಂಜನಗೂಡಿಗೆ ತೆರಳಿದ್ದಾರೆ.

ಮೃತರು ಕಪಿಲ ಟೆಕ್ಸ್‌ಟೈಲ್ಸ್ ಸಂಬಂಧವಾಗಿ ನಂಜನೆಗೂಡಿಗೆ ತೆರಳಿದ್ದರೆಂದು ಹೇಳಲಾಗಿದೆ.

ಜವಾನನೋರ್ವನು ಮಚ್ಚಿನಿಂದ ಅವರನ್ನು ಹೊಡೆದು ವಧಿಸಿದನೆಂದು ವರದಿಯಾಗಿದೆ.

ಮೈಸೂರು — ಶ್ರೀಮನ್ಮಹಾರಾಜರು ಕೃಷ್ಣರಾಜನಗರದಲ್ಲಿ ಆರೋಗ್ಯ ಕೇಂದ್ರವನ್ನು ಇದೇ ತಾ || 12 ರಲ್ಲಿ ಪ್ರಾರಂಭಗೊಳಿಸುವುದರಿಂದ ಜಿಲ್ಲಾ ಸಭೆ 23 ಕ್ಕೆ ಮುಂದುವರಿದಿದೆ.

ಮೈಸೂರು — ತಾ || 5 ರ ಮಧ್ಯಾಹ್ನ 4 ಗಂಟೆಗೆ ಮುಂದುವರಿದ ಪೌರಸಭೆಯ ಸಾಧಾರಣ ಅಧಿವೇಶನ ಸೇರುವುದು

ಅರಬ್ ಲೀಗಿನ ಪ್ಯಾಲಿಸ್ಟೈನ್ ನಿಧಿಗೆ 10 ಕೋಟಿ ರೂ ನಿಜಾಂ ಸರ್ಕಾರ ಕೊಡುವುದಾಗಿ ಬೆಂಗಳೂರಿಗೆಬಂದ ವರದಿ ತಿಳಿಸುವುದು. ಈ ದಾನಕ್ಕೆ ಕಾರಣ ಅರಬ್ ದೇಶಗಳನ್ನು ಒಲಿಸಿಕೊಂಡು ಅವರಾಲಕ ವಿಶ್ವಸಂಸ್ಥೆಯು ಸೆಪ್ಟಂಬರದ ಸಮಾವೇಶದಲ್ಲಿ ಹೈದರಾಬಾದಿನ ಸದಸ್ಯತ್ವ ತರುವಂತೆ ಮಾಡುವ ಇಚ್ಛೆಯಿದೆಂಗೊತ್ತಾಗಿದೆ

ಹೈದರಾಬಾದಿಗೆ ಸಹಾಯ ಮಾಡಲು ಬ್ರಿಟೀಷ್ ಪ್ರಧಾನಿ ಅಟ್ಲಿ ತಿರಸ್ಕರಿಸಿದ್ದಾರೆ

ಗೋಪಾಲರಾವ್ ವಿಚಾರಣಾ ಸಮಿತಿ ಕಂಟೆಪ್ಟ್ ಮೊಕದ್ದಮೆ ರಿವಿಜ್ ಅರ್ಜಿಗಳು 5 ನೇ ತಾ | ಗೆ ಮುಂದೆಹೋದವು. ಅಡ್ವೊಕೇಟ್ ಜನರಲ್ಲರು ಶ್ರೀ ರಾಜು, ಶ್ರೀ ರಾಮಯ್ಯ ಮತ್ತು ಶ್ರೀ ಶ್ರೀನಿವಾಸ್ ಜಾಮೀನುಗಳನ್ನು ರದ್ದು ಪಡಿಸಬೇಕೆಂದು ಒತ್ತಾಯ ಮಾಡುತ್ತೇನೆಂದು ತಿಳಿಸಿದರು.

ಇತ್ತೀಚಿಗೆ ಕಾಮನ್ಸ್ ಸಭೆಯಲ್ಲಿ ಶ್ರೀ ಚರ್ಚಿಲ್ಲರು ಮಾಡಿದ ಭಾಷಣದ ಪ್ರತಿಭಟನಾರ್ಥ ಅಂಬಾಲಾ ನಗರದಲ್ಲಿನ ಕಟ್ಟಡಗಳ ಮತ್ತು ರಸ್ತೆಗಳ ಇಂಗ್ಲೀಷ್ ನಾಮಧೇಯಗಳನ್ನು ಕಿತ್ತುಹಾಕಬೇಕೆಂದು ಅಂಬಾಲ ಪೌರಸಭೆಯು ನಿರ್ಣಯಿಸಿದೆ.

llands
m 3—8—1948
OUR
FEATHERS
(TECHNICOLOUR)
Thrills and Excitements
DAILY 3 SHOWS

ಪಾಕಿಸ್ಥಾನ ಅಧಿಕಾರಿಗಳು

ತಮ್ಮ ನೀರನ್ನು ಆಹಾರವನ್ನು
ಪಾಕಿಸ್ಥಾನದಿಂದಲೇ ತರುವರು.

ಪಾಕಿಸ್ಥಾನದ ಪಾಲಿನ ಯುದ್ಧ ಸಾಮಗ್ರಿಯನ್ನು ಒಯ್ಯಲು ಬಂದ ಪಾಕಿಸ್ಥಾನದ ಮಿಲಿಟರಿ ಅಧಿಕಾರಿಗಳು ಡಿಲ್ಲಿಗೆತಮ್ಮ ಆಹಾರವನ್ನು ನೀರನ್ನು ಸಹ ಪಾಕಿಸ್ಥಾನದಿಂದಲೇ ತಂದಿದ್ದರಂತೆ! ಹೀಗೇಕೆಂದು ಕೆಲವರು ಕೇಳಲಾಗಿ ಹಿಂದೂಸ್ಥಾನದಲ್ಲಿ ಹಿಂದೂಗಳು ಶಿಖರು ತಪ್ಪುಗೆಲ್ಲಿ ವಿಷಮಿಶ್ರಿತ ನೀರನ್ನು ಆಹಾರವನ್ನು ಕೊಡುವರೋ ಎಂಬ ಅನುಮಾನದಿಂದ ತಮ್ಮ ಆಹಾರವನ್ನು ನೀರನ್ನು ಪಾಕಿಸ್ಥಾನದಿಂದಲೇ ತರುತ್ತೇವೆಂದು ಹೇಳಿದರಂತೆ !!

ಹೆಸರುಗಳಲ್ಲಿ ಬದಲಾವಣೆ

ಕಾಶೀ ಹಿಂದೂ ವಿಶ್ವವಿದ್ಯಾಲಯ, ಅಲ್ಲಿ ಘರ್ ಮುಸ್ಲಿಂ ವಿಶ್ವವಿದ್ಯಾಲಯ ಗಳಿಗೆ ಹಿಂದೂ ಮುಸ್ಲೀಂ ಹೆಸರುಗಳನ್ನು ತೆಗೆದು ಹಾಕಿ ಕಾಶೀ ವಿದ್ಯಾಲಯ, ಅಲಿಘರ್ ವಿಶ್ವವಿದ್ಯಾಲಯ ಎಂಬುವ ಹೆಸರುಗಳನ್ನಿಡಬೇಕೆಂಬುವ ಬಿಲ್ಲುಗಳು ಡಿಲ್ಲೀ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟಿವೆ.

ಶ್ರೀವರಲಕ್ಷ್ಮೀ ಸಂಗೀತ ವಿದ್ಯಾಮಂದಿರ

ಮೈಸೂರಿನ ಸುಪ್ರಸಿದ್ಧ ಸಂಗೀತ ವಿದ್ವಾಂಸರಾದ ಶ್ರೀ ಮೈಸೂರು ಬ್ರದರ್ಸ್‌ರವರಿಂದ ನಡೆಸಲ್ಪಡುತ್ತಲಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರಕ್ಕೆ ಕಳೆದ ಶನಿವಾರ ಸಂಗೀತ ರತ್ನಾಕರ ಗಾಯಕಶಿಖಾಮಣಿ, ಆಸ್ಥಾನ ಸಂಗೀತ ವಿದ್ವಾನ್ ಶ್ರೀ ಅರೈಕುಡಿ ರಾಮಾನುಜಯ್ಯಂಗಾರ್ಯರು ಮೈಸೂರು ಸಹೋದರರು ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿ, ಮಂದಿರದ ಶಿಕ್ಷಣಕ್ರಮ, ಸಾಂಪ್ರದಾಯಕ ಮತ್ತು ಶಾಸ್ತ್ರೀಯ ಕರ್ನಾಟಕ ಸಂಗೀತ ಶಿಕ್ಷಣ ಮುಂತಾದುವನ್ನು ಮೆಚ್ಚಿ, ವಿದ್ಯಾರ್ಥಿಗಳನ್ನು ಆಶೀರ್ವದಿಸಿದರು ಶ್ರೀ ಮೈಸೂರು ಬ್ರದರ್ಸ್‌ರವರ. ಅರೈಕುಡಿಯವರು ಮಂದಿರಕ್ಕೆ ದಯಮಾಡಿದ್ದಕ್ಕಾಗಿ ಕೃತಜ್ಞತಾಪೂರ್ವಕ ಅಭಿನಂದನೆ ಸಲ್ಲಿಸಿ ಸತ್ಕರಿಸಿ ಕಳುಹಿಸಿಕೊಟ್ಟರು.

Edited, Printed and Published by M S Krishna Rao at the Satyavadi Press, Chamaraj Agrahar, Mysore,

ರಷ್ಯಾದ ರಹಸ್ಯ

ಈಗ ಎಲ್ಲರೂ ಮುಖ್ಯವಾಗಿ ಇಚ್ಚಿಸುವದು ಅಟಂ ಶಕ್ತಿಯ ಪರಿಶೋಧನೆಯಲ್ಲಿ ರಷ್ಯಾದ ಅಭಿವೃದ್ಧಿ. ಈ ಮರ್ಮಗಳನ್ನು ತಿಳಿದುಕೊಂಡು ತಿಳಿಸಿದಲ್ಲಿ 10 ಲಕ್ಷ ಡಾಲರುಗಳನ್ನು ಕೊಡಬಲ್ಲ ಸರ್ಕಾರಗಳಿವೆ. ರಷ್ಯಾ ಈ ಪರಿಶೋಧನೆಯಲ್ಲಿ ಎಷ್ಟು ಮುಂಜರಿದಿದೆ ಎಂಬುದನ್ನರಿಯಲು ಅನೇಕರು ಆತುರದೊಡನೆ ಇದ್ದಾರೆ. ಅಟಂ ಬಾಂಬು ಒಂದನ್ನು ತಂದುಕೊಟ್ಟಲ್ಲಿ ಇನ್ನೂ ಹೆಚ್ಚು ಹಣವನ್ನು ಕೊಡುವರಿದ್ದಾರೆ.

ಅಮೆರಿಕದ ಅಟಂ ಬಾಂಬು ಸಮಾಚಾರವನ್ನು ತಂದದ್ದಕ್ಕೆ ರಷ್ಯನರು ಅಷ್ಟು ಹಣ ವ್ಯಯ ಮಾಡಿದರು. ಹಣದ ಮಾತೆಂದರೆ ರಷ್ಯದ ಪರಿಶೋಧನಶಾಖೆಯು ಹಿಡಿಯನ್ನು ಬಿಗಿಸಿಕೊಳ್ಳುತ್ತದೆ. ವ್ಯಾಪಾರವು ಇದರಲ್ಲಿ ಸರಿಹೋಗದಿದ್ದಲ್ಲಿ ರಹಸ್ಯಾಯುಧಗಳನ್ನು ಕಾಳಸಂತೆಯಲ್ಲಿ ಮಾರುತ್ತಾರೆ ಫ್ರಾಕ್ಸು, ಪ್ಯಾಲಿಸ್ಟೈನ್ ಈ ಎರಡರ ನಡುವೆ ಇರುವ ಪ್ರತಿ ದೇಶದಲ್ಲಿಯೂ ಈಚೆಗೆ ರಹಸ್ಯವಾಗಿ ಆಯುಧಗಳ ಜಮಾವಣೆಯಾಗುತ್ತಿದೆ ಇವರ ಏಜೆಂಟರು ಆಯುಧಗಳ ಕಾಳ ಸಂತೆಯಲ್ಲಿ ಯೂರೋಪಿನಲ್ಲೆಲ್ಲಾ ಸುಳಿದಾಡುತ್ತಿದ್ದಾರೆ.

— —

ಸೂಚನೆ

ಭೀಮನವಾವಾಸ್ಯೆ ಪ್ರಯುಕ್ತ ನಾಳೆ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಪ್ರಬೋಧ ಪುಟದಿಂದೊಡಗೂಡಿದ
ರವಿವಾರ ಸಂಚಿಕೆ ವಾರ್ಷಿಕ ಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12-0

Save the Cow
ಗೋವಧೆ ನಿಲ್ಲಲಿ

At Opera
31—7—48 ರಿಂದ
ಟಿ. ಆರ್. ರಾಮಚಂದ್ರ
ಎಂ ಆರ್ ಸ್ವಾಮಿನಾಥ್ ಭಾಗ್ಯಂ
ಟಿ. ಪ್ರೇಮಾವತಿ ಪಾತ್ರವಹಿಸಿರುವರು
ವಿದ್ಯಾಪತಿ
(ತಮಿಳು)
.... ಪ್ರತಿದಿನ 3 ಆಟಗಳು ....
ಬಣ್ಣದ ರೀಲುಗಳುಳ್ಳದ್ದು



ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾ
ಶ್ರೀ 'ಓಂ' ಗುರುತಿನ ಕೇ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂ
ಸ್ಪೇನಿನ ಕೇಸರಿ ಗಿಡಗಳಲ್ಲಿಯು ಹೂಗಳಿಂದ ಆರಿಸಿ ತೆಗೆದುದಾಗಿ
ಸ್ಪಷ್ಟವಾಗಿ ಆನುದು ಮಾಡಲ್ಪಟ್ಟಿರತಕ್ಕದ್ದು ಬಹು ಹೋ
ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಾ
ರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ.
ಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂ
ಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸು
1 ತೋಲಾ, 5 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯು
ತ್ತದೆ. ಉಪಯೋಗಿಸಬೇಕಾಗಿ ವಿನಂತಿ
ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು